ನಂದೀದುರ್ಗ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ರ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 190.

ಅರ್ಜಿದಾರ್ ದೊಡ್ಡಬಳ್ಳಾಪುರ ತಾಲ್ಲೂಕು ಕಸಬಾ ಕೊಡಿಗೆಹಳ್ಳಿಯಲ್ಲಿರುವ ನಂಜುಂಡಪ್ಪನು, ಘಾತಿ ಈರಂಣನ ಮಕ್ಕಳು ಮೈನರಾದ ಕೊಡಿಗೆಹಳ್ಳಿ ಸ್ಥಳದ ಭದ್ರಮ್ಮ, ನರಸಮ್ಮ ಮತ್ತು ಭದ್ರಪ್ಪ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಭದ್ರಮ್ಮ, ನರಸಮ್ಮ ಮತ್ತು ಭದ್ರಪ್ಪ ಇವರಿಗೆ ತಂದೆಯ ಸಹೋದರನು ಆಗಬೇಕೆಂಬ ಹಕ್ಕಿನಮೇಲೆ, ಕೊಡಿಗೆಹಳ್ಳಿ ಸ್ಥಳದ ನಂಜುಂಡಪ್ಪನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ರ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ರ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 270.

ಅರ್ಜಿದಾರ್ ಬೆಂಗಳೂರ್ ಲಾಲ್‌ಬಾಗ್ ರೋಡಿನಲ್ಲಿರುವ ಘಾತಿ ವೇಸ್ಟ್ರ ರಾಮಂಣನ ಹೆಂಡತಿ ಮುನಿಯಮ್ಮ, ಮೈನರಾದ ಬೆಂಗಳೂರು ಸ್ಥಳದ ಶಿದ್ದರಾಮ, ಮುನಿಶಿದ್ದ, ಶಿದ್ದಪಾಪ, ಶಿವಶಿದ್ದ ಇವರುಗಳ ಆಸ್ತಿ ವಿಷಯದಲ್ಲಿ—

ಸದರೀ ಮೈನರಾದ 1ನೇ ಶಿದ್ದರಾಮ, 2ನೇ ಮುನಿಶಿದ್ದ, 3ನೇ ಶಿದ್ದಪಾಪ, 4ನೇ ಶಿವಶಿದ್ದ ಇವರುಗಳಿಗೆ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಸ್ಥಳದ ಮುನಿಯಮ್ಮ, ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ರ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 272.

ಅರ್ಜಿದಾರ್ ಸದಾಶಿವಯ್ಯ, ಮೈನರಾದ ತುಮಕೂರು ತಾಲ್ಲೂಕು ಮನ್ನೆಕೊಳಾಲ ಸ್ಥಳದ ರಾಮಸ್ವಾಮಿ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಸ್ವಾಮಿಗೆ, ಜನಕತಂದೆ ಆಗಬೇಕೆಂಬ ಹಕ್ಕಿನ ಮೇಲೆ ಮನ್ನೆಕೊಳಾಲ ಸ್ಥಳದ ಸದಾಶಿವಯ್ಯನು, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1895ನೇ ಇಸವಿ ಫಿಬ್ರವರಿ ತಿಂಗಳ 6ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1894—95ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 273.

ಅರ್ಜಿದಾರ್ ಬನ್ನೂರಿಂಗೇಟೆ ತಾಲ್ಲೂಕು ಬೇತಮಂಗಲದಲ್ಲಿರುವ ಅಲ್ಲಿಹುಸೇಖಾ, ಮೈನರಾದ ಬೇತಮಂಗಲ ಸ್ಥಳದ ಗೌಸಾಖಾ ಅಬ್ದುಲ್ ಲತಿಫ್‌ಖಾ, ಖಾಕೂಬಿ ಇವರುಗಳಿಗೆ ಕ್ಲೋಸ್‌ಪೇಟೆ ಕಸಬಾದಲ್ಲಿದ್ದು ಮೃತಪಟ್ಟು ಮೈನೊರ್ದಿ ಮಸ್ತ್ಯಾಸಾಬಿಯು ವಿಲ್ಲಿನಲ್ಲಿ ನಮೂದು ಮಾಡುವ ಮೂರುಸಾವಿರ ರೂಪಾಯಿನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಗೌಸಾಖಾ, ಅಬ್ದುಲ್ ಲತಿಫ್‌ಖಾ, ಖಾಕೂಬಿ ಇವರಿಗೆ ತಂಬೆ, ಆಗಬೇಕೆಂಬ ಹಕ್ಕಿನಮೇಲೆ ಬೇತಮಂಗಲ ಸ್ಥಳದ ಅಲ್ಲಿಹುಸೇಖಾ, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ರ 1895ನೇ ಇಸವಿ ಮಾರ್ಚಿ ತಾರೀಖು 2ರಲ್ಲು ಮೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ರ 1895ನೇ ಇಸವಿ ಫಿಬ್ರವರಿ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟ್ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ರ 1894—95ನೇ ಇಸವಿ ಮಿ|| ಅರ್ಜಿ ನಂಬರ್ 283.

ದೇವನಹಳ್ಳಿಯಲ್ಲಿದ್ದ ಲಕ್ಷ್ಮೀನಾರಾಯಣ ಜೋಯಿಸರ ಮಗ ದೇವನಹಳ್ಳಿ ತಾಲ್ಲೂಕು ಬೂದಿಗೆರೆಯಲ್ಲಿ ಮೃತಪಟ್ಟ ಗುಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜಿದಾರು ಚಿಕ್ಕಬಳ್ಳಾಪುರ ತಾಲ್ಲೂಕು ಸುಲ್ತಾನ್‌ಪೇಟೆಯಲ್ಲಿರುವ ಸಾಕಮ್ಮ ಮೈನರ್, ಗಾರ್ಡಿಯರ್ ತಂದೆ ಕೇಶಪ್ಪ, ಮೃತಪಟ್ಟ ಸದರೀ ಗುಂಡಪ್ಪನಿಗೆ ಮಾವನು ಆಗಬೇಕೆಂಬ ಹಕ್ಕುದಾರಿಮೇಲೆ ಸುಲ್ತಾನ್‌ಪೇಟೆ ಸ್ಥಳದ ಕೇಶಪ್ಪನು, ದೇವನಹಳ್ಳಿ ತಾಲ್ಲೂಕು ಬೂದಿಗೆರೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಗುಂಡಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ರ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.